ಅಭಿವೃದ್ಧಿ ಮಾಡುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೆ; ಹೌದಾದಲ್ಲಿ ಯಾವಾಗ ಅದನ್ನು ಕಾರ್ಯಗತ ಮಾಡಲಾಗುವುದು;

ಆ) ಶೃಂಗೇರಿ, ಕಳಸ, ಧರ್ಮಸ್ಥಳ, ಸುಬ್ರಹ್ಮಣ್ಯ ಕ್ಷೇತ್ರಗಳಿಗೆ ಸಂಚಾರಕ್ಕೆ ಅನುಕೂಲವಾಗುವ ಸಂಪರ್ಕ ರಸ್ತೆಯಾಗಿ (ಲಿಂಕ್ ರೋಡ್) ಸೋಮಂಡಡ್ಕ, ದಿಡ್ಪೆ, ಎಳನೀರು, ಸಂಸೆ ರಸ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಯೋಜನೆಯನ್ನು ರೂಪಿಸಿರುವರೆ; ಹೌದಾದಲ್ಲಿ ಅದರ ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಆ) ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು, ಸರ್ಕಾರವು ಸಧ್ಯಕ್ಕೆ ಯಾವುದೇ ಯೋಜನೆ ರೂಪಿಸಿರುವುದಿಲ್ಲ, ಆದಾಗ್ಯೂ ವಾರ್ಷಿಕ ನಿರ್ವಹಣೆಯ ಅನುದಾನದಲ್ಲಿ ರಸ್ತೆಯನ್ನು ದುರಸ್ತಿ ಮಾಡಲಾಗುವುದು.

ಆ) ಸದರಿ ರಸ್ತೆಯ ಭಾಗದ ಅಭಿವೃದ್ಧಿಗಾಗಿ, ಸರ್ಕಾರವು ಸಧ್ಯಕ್ಕೆ ಯಾವುದೇ ಯೋಜನೆ ರೂಪಿಸಿಲ್ಲ, ಆದಾಗ್ಯೂ ವಾರ್ಷಿಕ ನಿರ್ವಹಣೆಯ ಅನುದಾನದಲ್ಲಿ ರಸ್ತೆಯನ್ನು ದುರಸ್ತಿ ಮಾಡಲಾಗುವುದು.

ಗುರುವಾಯನ ಕೆರೆಯ ದೊಡ್ಡಕೆರೆ ಕಾಡು ಬಗ್ಗೆ

1728 (2392) ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆ ಪ್ರದೇಶದಲ್ಲಿರುವ ದೊಡ್ಡಕೆರೆ ಹತ್ತಿರವಿರುವ ಕಾಡನ್ನು ಹಿಂದೆ ಇದ್ದ ಪ್ರಸ್ತಾವನೆಯಂತೆ ಅರಣ್ಯ ಇಲಾಖೆಯವರು ಸ್ವಾಧೀನಪಡಿಸಿಕೊಂಡು ಪಕ್ಷಿಧಾಮವಾಗಿ ಘೋಷಿಸುವ ಕುರಿತು ಇಲಾಖೆಯವರು ಜರುಗಿಸಿದ ಕ್ರಮಗಳೇನು;

ಆ) ಈ ಕೆರೆಯನ್ನು ಪ್ರಕೃತಿ ವೀಕ್ಷಣ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಿ ಪ್ರವಾಸಿಕೇಂದ್ರವನ್ನಾಗಿ ಮಾಡಲು ಸರಕಾರದವರು ಸಕಾಲಿಕ ಕ್ರಮವನ್ನು ಕೈಗೊಳ್ಳುವರೇ;

ಇ) ಈ ಕೆರೆಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿರುವ ಹಾಗೂ ವಲಸೆ ಬರುತ್ತಿರುವ ಪಕ್ಷಿ ಸಂಕುಲಗಳನ್ನು ಇಲಾಖೆಯು ಗುರುತಿಸಿದೆಯೇ; ಗುರುತಿಸಿದ್ದಲ್ಲಿ ಅವುಗಳು ಯಾವುವು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು).

ಆ) ಸರ್ಕಾರದಲ್ಲಿ ಪ್ರಸ್ತಾವನೆ ಇಲ್ಲ.

ಆ) ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಈ ಕೆರೆಯ ಸುತ್ತಮುತ್ತಲು ವಲಸೆ ಬರುವ ಪಕ್ಷಿಗಳನ್ನು ಗುರುತಿಸಿರುವುದಿಲ್ಲ.

ರಾಜ್ಯ ಪತ್ರಗಾರ ಇಲಾಖೆ ಬಗ್ಗೆ

1729 (2393) ಶ್ರೀ ಪ್ರಭಾಕರ ಬಂಗೇರ .ಕೆ. (ಬೆಳ್ತಂಗಡಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪತ್ರಾಗಾರ ಇಲಾಖೆಯು ಯಾವ ವರ್ಷದಿಂದ ಪ್ರಾರಂಭವಾಯಿತು-ಅದರ ಉದ್ದೇಶಗಳೇನು;

ಆ) ಇಲಾಖೆಗೆ ಇದುವರೆವಿಗೆ ಮಂಜೂರಾದ ವಿವಿಧ ಹುದ್ದೆಗಳ ವಿವರಗಳೇನು; (ವೃಂದವಾರು ವಿವರ ಒದಗಿಸುವುದು)

ಇ) ಸೂಕ್ಷ್ಮ ಚಿತ್ರೀಕರಣ ವ್ಯವಸ್ಥೆಯಿಂದ ಇದುವರೆಗೆ ಸಾಧಿಸಲಾದ ಕಾರ್ಯ ವಿವರಗಳೇನು; ಈ ಕಾರ್ಯಕ್ಕಾಗಿ ಮಾಡಿದ ವೆಚ್ಚಗಳೆಷ್ಟು (ಐದು ವರ್ಷಗಳ ವಿವರ ನೀಡಿ);

ಈ) ಇಲಾಖೆಯ ಸುಧಾರಣೆಗೆ ಸಂಬಂಧ ಪಟ್ಟಂತೆ ಡಿಪಿಎಆರ್ ಇಲಾಖೆಯವರು ನಡೆಸಿದ ತಪಾಸಣಾ ವರದಿ (1990) ಯನ್ನು ಅನುಷ್ಠಾನಗೊಳಿಸಲಾಗಿದೆಯೇ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).

ಅ) ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯವು ಡಿಸೆಂಬರ್ 1973 ರಲ್ಲಿ ಪ್ರಾರಂಭವಾಯಿತು.

ಅದರ ಉದ್ದೇಶಗಳು

1. ಕರ್ನಾಟಕ ಸರ್ಕಾರದ ಸಚಿವಾಲಯದ ಚಾಲ್ತಿಯಲ್ಲಿಲ್ಲದ ಆಡಳಿತಾತ್ಮಕವಾಗಿ ಪ್ರಮುಖವಾದ ಹಾಗೂ ಐತಿಹಾಸಿಕ ಮಹತ್ವದ ದಾಖಲೆಗಳನ್ನು ಸ್ವೀಕರಿಸಿ ವೈಜ್ಞಾನಿಕವಾಗಿ ಸಂರಕ್ಷಿಸುವುದು ಹಾಗೂ ಈ ರೀತಿ ಸಂರಕ್ಷಿಸಿದ ದಾಖಲೆಗಳನ್ನು ಸರ್ಕಾರದ ಇಲಾಖೆಗಳಿಗೆ ಸಾರ್ವಜನಿಕರಿಗೆ ಹಾಗೂ ವಿದ್ವಾಂಸರ ಬಳಕೆಗೆ ನೀಡುವುದು.

2. ಇತಿಹಾಸ ಸಂಶೋಧಕರು ಹಾಗೂ ವಿದ್ವಾಂಸರಿಗೆ ಅವರ ಸಂಶೋಧನೆಗಳಿಗೆ ಅನುಕೂಲವಾಗುವ ಖಾಸಗಿ ಒಡೆತನದಲ್ಲಿರುವ, ಅಂದರೆ, ಧಾರ್ಮಿಕ ಸಂಸ್ಥೆಗಳು, ಪ್ರಮುಖ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು,ಕೈಗಾರಿಕಾ ಸಂಸ್ಥೆಗಳು ಹಾಗೂ ಗಣ್ಯವ್ಯಕ್ತಿಗಳಿಂದ ಐತಿಹಾಸಿಕ ಮಹತ್ವಗಳುಳ್ಳ ದಾಖಲೆಗಳ ತುಲನಾತ್ಮಕ ಪರಿವೀಕ್ಷಣೆ ಮಾಡಿ, ವೈಜ್ಞಾನಿಕವಾಗಿ, ಸಂರಕ್ಷಿಸಿ ಸಂಶೋಧಕರಿಗೆ ಒದಗಿಸುವುದು.

3. ದಾಖಲೆ ಸಂರಕ್ಷಣೆ ಬಗ್ಗೆ ಸರ್ಕಾರದ ಇಲಾಖೆಗಳಿಗೆ ಬಯಸಿದ ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡುವುದು ಅಲ್ಲದೆ ದಾಖಲೆ ಸಂರಕ್ಷಣೆ ಬಗ್ಗೆ ತರಬೇತಿ ನೀಡುವುದು.

ಆ) ಈ ನಿರ್ದೇಶನಾಲಯಕ್ಕೆ ಈವರೆಗೆ ಒಟ್ಟು 138 ಹುದ್ದೆಗಳು ಮಂಜೂರಾತಿಯಾಗಿದ್ದು,